ಈ ವರ್ಷಾಂತರದೊಳಗೆ ಒಪ್ಪಿಸುತ್ತಿದ್ದಾರೆ. ಮಾದರಿ ಕೈಗಾರಿಕಾ ನಗರವನ್ನು ಎಲ್ಲಿ ಸ್ಥಾಪಿಸಬೇಕೆಂದು ನಿರ್ಧಾರ ಮಾಡತಕ್ಕಂಥವರು ಜಪಾನ್ ಮತ್ತು ಭಾರತ ಸರ್ಕಾರದವರು. ಜಪಾನಿನ 'ಜೈಕಾ' ತಂಡದವರು ನಮ್ಮ ರಾಜ್ಯಕ್ಕೆ ಈ ಹಿಂದೆ ದಿನಾಂಕ 7.8.92 ರಲ್ಲಿ ಭೇಟಿ ಕೊಟ್ಟಿದ್ದು ಮತ್ತು ಇತ್ತೀಚೆಗೆ ಅಂದರೆ 3.2.93 ರಲ್ಲೂ ಸಹ ಭೇಟಿ ಕೊಟ್ಟಿದ್ದು, ಆಗ ರಾಜ್ಯದಲ್ಲಿನ ಕೆಲವಾರು ಜನರು ಈ ಜಪಾನಿ ಟೌನ್‌ಶಿಪ್ ಸ್ಥಾಪನೆ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ, ಇಲ್ಲಿ ಒಂದು ತಪ್ಪು ಕಲ್ಪನೆ ಜನರಲ್ಲಿದೆ. ಏನೆಂದರೆ, ಈ ಜಾಗವನ್ನು ನಾವು ಜಪಾನ್ ದೇಶದವರಿಗೆ ಕೊಟ್ಟರೆ ಅವರು ಅಲ್ಲೇ ನೆಲೆಸಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅನ್ನು ಅಭಿವೃದ್ಧಿ ಮಾಡುತ್ತಾರೆನ್ನುವುದು. ಆದರೆ, ಅವರ ಪಾತ್ರ ಏನಿದ್ದರೂ ಅದು ಕನ್ಸಲ್‌ಟೆನ್ಸಿಗೆ ಮಾತ್ರ ಸೀಮಿತವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಅವರು ಅಲ್ಲಿ ಮಾಡತಕ್ಕಂಥ ಕೆಲಸವೆಂದರೆ, " To develop all infrastructural facilities needed to establish hi-tech industries to international standards." ಆ ಸ್ಥಳದಲ್ಲಿ ಯಾರ್ಯಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೆಂದರೆ, ಬಹು ರಾಷ್ಟ್ರೀಯ ಸಂಸ್ಥೆಗಳವರು ಬರಬಹುದು, ಅನಿವಾಸಿ ಭಾರತೀಯರು ಬರಬಹುದು ಅಲ್ಲದೆ, ರಾಜ್ಯದಲ್ಲಿರುವ ಉದ್ಯಮಶೀಲರಿಗೂ ಸಹ ಸ್ವಾಗತವಿದೆ, ರಾಜ್ಯದ ಹೊರಗಿನವರಿಗೂ ಕೂಡ ತೆರೆದ ಸ್ವಾಗತವಿದೆ. ಆ ಸ್ಥಳದಲ್ಲಿ ಇನ್ನೂ ಕೈಗಾರಿಕೆ ಸ್ಥಾಪನೆಯಾಗುವುದರ ಬಗ್ಗೆ ನಿರ್ಧಾರವಾಗದಿರುವುದರಿಂದ ಈ ಕುರಿತು ಯೋಜನೆ ಮಾಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾದರಿ ಕೈಗಾರಿಕಾ ನಗರ ಸ್ಥಾಪಿಸಲು ರಾಜ್ಯ ಸರ್ಕಾರದ ಪಾಲುಗಾರಿಕೆ ಏನಾದರೂ ಇದೆಯೆ? ಇದ್ದರೆ, ಎಷ್ಟು ಪಾಲುಗಾರಿಕೆ ಇದೆ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ : ನಾವು ಯಾವ ಮಟ್ಟದಲ್ಲಿ ಪಾಲ್ಗೊಳ್ಳಬಹುದೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಜಪಾನ್ ಸರ್ಕಾರದವರು ನಮಗೆ ಕೇಳಿರುವುದೇನೆಂದರೆ ಕೈಗಾರಿಕೆ ಸ್ಥಾಪಿಸಲು ನೀವು ಜಾಗ ಕೊಡುವುದಕ್ಕೆ ತಯಾರಾಗಿದ್ದೀರಾ? ತಯಾರಾಗಿದ್ದರೆ ಆ ಜಾಗ ಎಲ್ಲಿದೆ? ಅಲ್ಲಿ ಏನೇನು ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್ ಇವೆ? ನೀರಿನ ಅನುಕೂಲತೆ ಇದೆಯೇ? ವಿದ್ಯುಚ್ಛಕ್ತಿ ಸೌಕರ್ಯವಿದೆಯೇ? ಹವಾಗುಣ ಮುಂತಾದುವುಗಳ ವಿವರ ಕೇಳಿದ್ದು, ಅವೆಲ್ಲವನ್ನೂ ಒದಗಿಸಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ದೇಶಕ್ಕೆಲ್ಲ ಒಂದೇ ಒಂದು ಪ್ರಾಜೆಕ್ಟ್ ಕೊಡುತ್ತಿರುವುದರಿಂದ, ಒಂದು ಸ್ಥಳವಲ್ಲದೆ ಇನ್ನೂ 2-3 ಸ್ಥಳಗಳನ್ನು ಕೈಗಾರಿಕೆ ಸ್ಥಾಪಿಸಲು ಅವರಿಗೆ ಏಕೆ ಸೂಚಿಸಲಿಲ್ಲ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ : ಈಗಾಗಲೇ ನಾನು ಹೇಳಿದ ಹಾಗೇ ಬೇರೆ ಬೇರೆ ರಾಜ್ಯಗಳಲ್ಲಿ ಒಂದೇ ಸ್ಥಳವನ್ನು ಸೂಚಿಸಿದ್ದರೂ, ನಾವು ನಮ್ಮ ರಾಜ್ಯದ ಎರಡು ಸ್ಥಳಗಳನ್ನು ಸೂಚಿಸಿದ್ದೇವೆ. ಯಾವುದೆಂದರೆ, ರಾಮನಗರ ತಾಲ್ಲೂಕಿನ ಬಿಡದಿ ಬಳಿ ಮತ್ತೊಂದು ಕನಕಪುರ ತಾಲ್ಲೂಕಿನ ಸಾತನೂರಿನ ಬಳಿ. ಈ ಎರಡು ಜಾಗಗಳನ್ನು ನಾವು ಸೂಚಿಸಿದ್ದೇವೆ.

ವಿಷಯ : ಪರಿಶಿಷ್ಟ ಜಾತಿಯವರ ಮೇಲೆ ಸಾಮಾಜಿಕ ಬಹಿಷ್ಕಾರ

Q: 1404

ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ಸಾಮಾಜಿಕ ಬಹಿಷ್ಕಾರ ಮತ್ತು ದೌರ್ಜನ್ಯ ನಡೆದ ಅನೇಕ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿಯ ಶೋಷಣೆ ಮತ್ತು ಕಿರುಕುಳಗಳಿಂದ ಇವರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರವು ಕೈಗೊಂಡ ಪರಿಣಾಮಕಾರಿ ಪರಿಹಾರೋಪಾಯಗಳಾವುವು?

ಇ) ಇವರು ಸ್ವಾತಂತ್ರ್ಯ ಮತ್ತು ವೈಯಕ್ತಿಕ ಜೀವನ ಸಾಗಿಸಲು ಸರ್ಕಾರವು ಜಮೀನನ್ನು ವ್ಯವಹರಿಸಿಕೊಂಡು ಅವರಿಗೆ ನೀಡಲು ಅಯವ್ಯಯದಲ್ಲಿ ಪ್ರತ್ಯೇಕ ಅವಕಾಶ ಮಾಡಿಕೊಳ್ಳುವುದಕ್ಕೆ ಸರ್ಕಾರ ಪರಿಶೀಲಿಸುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿವೆ.

ಆ) 1. ಪರಿಶಿಷ್ಟ ಜಾತಿ; ಪರಿಶಿಷ್ಟ ವರ್ಗಗಳವರ ಮೇಲೆ ನಡೆಯುವ ದೌರ್ಜನ್ಯ ತಡೆಯಲು ಮತ್ತು ಅವರಿಗೆ ಸಂವಿಧಾನದ ಅನ್ವಯ ನೀಡಲಾಗಿರುವ ನಾಗರೀಕ ಹಕ್ಕುಗಳನ್ನು ಜಾರಿಗೊಳಿಸಲು ನಾಗರೀಕ ಹಕ್ಕುಜಾರಿ ನಿರ್ದೇಶನಾಲಯವನ್ನು ರಚಿಸಲಾಗಿದೆ.

2. ಜಿಲ್ಲಾ ಉಪವಿಭಾಗ; ತಾಲ್ಲೂಕು ಮಟ್ಟದಲ್ಲಿ ಅವರ ರಕ್ಷಣೆಗಾಗಿ ಸಮಿತಿಗಳನ್ನು ರಚಿಸಲಾಗಿದೆ.

3. ದೊಡ್ಡ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಗೃಹ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ರಾಜ್ಯ ಮಟ್ಟದ ಉನ್ನತ ಸಮಿತಿ ರಚಿಸಲಾಗಿದೆ.

4. ದೌರ್ಜನ್ಯ ನಡೆಯುವ ಬಗ್ಗೆ ಸುಳಿವು ಸಿಕ್ಕ ಕೂಡಲೇ ಪೋಲೀಸ್, ಕಂದಾಯ ಮತ್ತು ಸಮಾಜ ಕಲ್ಯಾಣಾಧಿಕಾರಿಗಳು ಸ್ಥಳಕ್ಕೆ ಧಾವಿಸಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವರು.

5. ದೌರ್ಜನ್ಯ ನಡೆದ ಸಂಗತಿ ವರದಿಯಾದ ಕೂಡಲೇ ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ್ ಅಧಿಕಾರಿ ಮತ್ತು ಸಮಾಜ ಕಲ್ಯಾಣಾಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಪುನರ್ವಸತಿ ಸೌಲಭ್ಯ ಹಾಗೂ ರಕ್ಷಣಾ ಏರ್ಪಾಡು ಮಾಡುವರು.

6. ಪೋಲೀಸ್ ಅಧಿಕಾರಿಗಳು ನಿಯಮಿತವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಸತಿ ಸ್ಥಳಗಳಿಗೆ ಭೇಟಿ ನೀಡುವರು.

7. ದೌರ್ಜನ್ಯ ನಡೆಸಿದವರ ಮೇಲೆ ಕಾನೂನಿನನ್ವಯ ತುರ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ.

8. ದೌರ್ಜನ್ಯ ಪ್ರಕರಣಗಳ ತುರ್ತು ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳನ್ನು ರಚಿಸಲಾಗಿದೆ.

9. ಬಹಿಷ್ಕಾರ ನಡೆದ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ ; ಪರಿಶಿಷ್ಟ ವರ್ಗದ ಜನರಿಗೆ ಸರ್ಕಾರ ವಿವಿಧ ಯೋಜನೆಗಳ ಅಡಿ ಮರು ವಸತಿ, ಉದ್ಯೋಗ ಅವಕಾಶ ಆಹಾರ ಪದಾರ್ಥಗಳ ಹಂಚಿಕೆ ಇತ್ಯಾದಿಗಳನ್ನು ಮಾಡಲಾಗುತ್ತದೆ.

ಇ) ಅಗತ್ಯವಿಲ್ಲ. ಆದರೆ ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ ಪರಿಶಿಷ್ಟ ಜಾತಿ ; ಪರಿಶಿಷ್ಟ ವರ್ಗಗಳ ಭೂರಹಿತ ಕೃಷಿ ಕಾರ್ಮಿಕರಿಗಾಗಿ ಭೂ ಒಡೆತನ ಎಂಬ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಜಮೀನಿನ ಲಭ್ಯತೆಯನ್ನು ಅನುಸರಿಸಿ ದೌರ್ಜನ್ಯಕ್ಕೊಳಗಾದ ಸಂತ್ರಸ್ಥರೂ ಸಹ ಈ ಯೋಜನೆಯ ಲಾಭ ಪಡೆಯಬಹುದು.

ಶ್ರೀ ಕೆ. ಸಿದ್ದಯ್ಯ : ಸನ್ಮಾನ್ಯ ಅಧಕ್ಷರೆ, ಪ್ರಾಮುಖ್ಯವಾಗಿ ಎಸ್.ಸಿ.ಎಸ್.ಟಿ. ಜನಾಂಗದವರ ಮೇಲೆ ನಡೆಯತಕ್ಕ ದೌರ್ಜನ್ಯ ಮತ್ತು ಸಾಮಾಜಿಕ ಬಹಿಷ್ಕಾರದ ವಿಚಾರದ ಬಗ್ಗೆ ಅವರಿಗೆ ರಕ್ಷಣೆಯನ್ನು ಕೊಡುವುದಕ್ಕೆ ನಾನಾ ರೀತಿಯಾದ ಸಮಿತಿಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಅಂತ ಸಮಿತಿಗಳು ತಾಲ್ಲೂಕು, ಸಬ್‌ಡಿವಿಷನ್, ಡಿಸ್ಟ್ರಿಕ್ಟ್‌ಲೆವಲ್‌ಗಳಲ್ಲಿ ಇವೆ ಎಂದು ಹೇಳಿದ್ದೀರಿ. ಇಂಥ ಕಮಿಟಿಗಳಿಗೆ ನೀವು ಏನು ಎಂ.ಎಲ್.ಎ.ಗಳನ್ನು ನೇಮಕ ಮಾಡಿದ್ದೀರಿ ಅವರುಗಳು ಯಾರೂ ಕೂಡ ಆ ಸಮಿತಿಗೆ ಬರುತ್ತಿಲ್ಲ, ಅವರುಗಳು ಬಂದರೆ ಅನೇಕ ವಿಚಾರಗಳಲ್ಲಿ ತೊಂದರೆಯಾಗುತ್ತದೆ. ಇದರ ಬಗ್ಗೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಹಿಂದೆಯೂ ಕೂಡ ನಾನು ಈ ವಿಚಾರದಲ್ಲಿ ಕೇಳಿದ್ದೆ. ಎರಡನೆಯದಾಗಿ ಸಾಮಾಜಿಕ ಬಹಿಷ್ಕಾರದ ವಿಚಾರದಲ್ಲಿ ಸರ್ಕಾರದಿಂದ ಆಹಾರ ಧಾನ್ಯಗಳನ್ನು ಒದಗಿಸುತ್ತೇವೆ, ಕೆಲಸಕಾರ್ಯಗಳನ್ನು ಒದಗಿಸುತ್ತೇವೆ ಎಂದು ಹೇಳಿದ್ದೀರಿ. ಇದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾದಂಥ ಪರಿಹಾರವಾಗುತ್ತದೆಯೊ ನನಗೆ ಗೊತ್ತಿಲ್ಲ. ನಾನು ಕೇಳಿರತಕ್ಕ ಪ್ರಶ್ನೆಯಲ್ಲಿ ತಾವು ಪರಿಹಾರವನ್ನು ಕೊಡಬೇಕಾದರೆ ಜಮೀನುಗಳನ್ನು ಕೊಂಡುಕೊಂಡು ಇವರಿಗಾಗಿ ಸಪರೇಟ್ ಆಗಿ ಅಡಿಕ್ವೇಟ್ ಬಜೆಟ್ ಅನ್ನು ಕೊಟ್ಟು, ಜಮೀನನ್ನು ಅಕ್ವೈರ್ ಮಾಡಿಕೊಂಡು ಅಲ್ಲ ಅವರಿಗೆ ಸೆಟಲ್ ಮಾಡಿದರೆ ಮಾತ್ರ ಅವರುಗಳು ಸ್ವಾತಂತ್ರ್ಯವಾಗಿ ಮಾನ ಮರ್ಯಾದೆಯಿಂದ ಇನ್ನೊಬ್ಬರ ಮೇಲೆ ದಿನನಿತ್ಯದ ಕೆಲಸಕ್ಕಾಗಿ ಅವಲಂಬಿಸದೆ ಇರತಕ್ಕ ರೀತಿಯಲ್ಲಿ ಮಾಡಬಹುದಲ್ಲ ಎಂದು ಕೇಳಿದ್ದೇನೆ. ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಉತ್ತರವಿಲ್ಲ. ತಾವು ಅವರಿಗೆ ಆಹಾರ ಧಾನ್ಯಗಳನ್ನು ಕೊಟ್ಟರೆ ಅದನ್ನು ಕೊಂಡುಕೊಳ್ಳಲು ಅವರಿಗೆ ಹಣಬೇಕಲ್ಲ? ಅವರಿಗೆ ಕೆಲಸ ಸಿಗಬೇಕಲ್ಲ? ಎಷ್ಟು ದಿನ ತಾನೆ ಸರ್ಕಾರ ಅದನ್ನು ಕೊಡಿಸಲು ಸಾಧ್ಯವಾಗುತ್ತದೆ? ಇದರಿಂದ ಸರ್ಕಾರಕ್ಕೆ ಹೆಚ್ಚು ಶ್ರಮವಾಗುತ್ತದೆ. ಆ ಜನರಿಗೆ ಪರಿಹಾರವೂ ಸಿಗುವುದಿಲ್ಲ, ಸರ್ಕಾರಕ್ಕೆ ಹಣವೂ ಉಳಿತಾಯವಾಗುವುದಿಲ್ಲ. ಆದುದರಿಂದ ಜಮೀನನ್ನು ಅಕ್ವೈರ್ ಮಾಡಿ ಕೊಡುವ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧಕ್ಷರೇ, ಮಾನ್ಯ ಸಿದ್ದಯ್ಯ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ಸಬ್ ಡಿವಿಷನ್ ಮಟ್ಟದಲ್ಲಿ ಏನು attrocities-ಕಮಿಟಿ ಮಾಡಿದ್ದೇವೆ. ಅಲ್ಲಿಗೆ ಪ್ರತಿನಿಧಿಗಳಾಗಿರುವ ವಿಧಾನ ಸಭೆಯ ಸದಸ್ಯರುಗಳು ಸರಿಯಾಗಿ ಹೋಗುತ್ತಿಲ್ಲ, ಆ ಸಮಿತಿಗಳು ಸರಿಯಾಗಿ ನಡೆಯತಿಲ್ಲವೆನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನು ಗೃಹಸಚಿವನಾಗಿದ್ದಾಗಲೂ ಕೂಡ ಪೋಲೀಸ್ ಅಧಿಕಾರಿಗಳಿಗೆ ಜಿಲ್ಲಾಮಟ್ಟದಲ್ಲಿ ವಿಶೇಷವಾದ ಸಭೆಯನ್ನು ನಡೆಸಬೇಕೆಂದು ಹೇಳಿದ್ದೇನೆ, ಇದಲ್ಲದೆ ಗೃಹಸಚಿವರ ಅಧ್ಯಕ್ಷತೆಯಲ್ಲಿ

ರಾಜ್ಯಮಟ್ಟದಲ್ಲಿ ಮೂರು ತಿಂಗಳಿಗೊಮ್ಮೆ ಇಂಥ ಒಂದು ಸಮಿತಿ ಕೂಡ ನಡೆಯಬೇಕೆಂದು ಇದೆ., ಎಲ್ಲೆಲ್ಲಿ ಇಂಥ ದೌರ್ಜನ್ಯವಾಗಿದೆ ಅಲ್ಲಿ social boycott ಬಂದಾಗ ಕೂಡ ಕ್ರಮ ಕೈಗೊಳ್ಳಲಾಗಿದೆ. ಇದರ ಬಗ್ಗೆ ನಾನು ಸಾಕಷ್ಟು ಉಲ್ಲೇಖವನ್ನು ಮಾಡುವುದಕ್ಕೆ ತಯಾರಾಗಿಲ್ಲ.ನಾನು ಸಮಾಜಕಲ್ಯಾಣ ಇಲಾಖೆಯ ಮಂತ್ರಿಯಾದಮೇಲೆ ಮೊನ್ನೆ ಹೊಸದುರ್ಗದಲ್ಲಿ ನಡೆದಂಥ social boycott ಬಗ್ಗೆ ನನಗೆ ತಿಳಿದ ಮೇಲೆ ನಾನು ಅಲ್ಲಿಗೆ ಖುದ್ದಾಗಿ ಹೋಗಿಬಂದಿದ್ದೇನೆ, ಅಲ್ಲಿ ನೆರವನ್ನು ಕೊಟ್ಟಿದ್ದೇವೆ, ಅವರು ವಿಶೇಷವಾಗಿ ಪರಿಶಿಷ್ಟ ಜನರಿಗೆ ಏನಾದರೂ ಪರಿಹಾರವನ್ನು ಕೊಡತಕ್ಕದ್ದು ಇದೆಯೆ ಎನ್ನತಕ್ಕ ಬಗ್ಗೆ ಹೇಳಿದ್ದಾರೆ, ಅದಕ್ಕೆ ಉತ್ತರ ಕೊಟ್ಟಿದ್ದೇವೆ, ಇನ್ನು ಜಮಾನು ಮತ್ತೊಂದು ಅದು ಬೇರೆ ಆಗುತ್ತದೆ.ಆದರೆ ಇಷ್ಟು ಮಾತ್ರ ತಾತ್ಕಾಲಿಕವಾಗಿ ಹೇಳುವುದಾದರೆ , ಎಲ್ಲೆಲ್ಲಿ ದೌರ್ಜನ್ಯ ನಡೆಯುತ್ತಿದೆ ಆ ಸ್ಥಳಕ್ಕೆ ಹೋಗಿ ಅವರಿಗೆ ಪರಿಹಾರವನ್ನು ಕೊಡತಕ್ಕ ರೀತಿಯಲ್ಲಿ, ಧನ, ಧಾನ್ಯಗಳನ್ನು ಕೊಡತಕ್ಕ ರೀತಿಯಲ್ಲಿ ಮತ್ತು ರೀಹ್ಯಾಬಿಲಿಟೇಶನ್ ತೆಗೆದುಕೊಳ್ಳಬೇಕಾದ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಮಾನ್ಯ ಸಿದ್ದಯ್ಯನವರಿಗೆ ಗೊತ್ತಿದೆ, ಕರ್ನಾಟಕ ರಾಜ್ಯದಲ್ಲಿ ಎಸ್. ಸಿ. ಎಸ್. ಟಿ. ಡೆವಲೆಪ್‌ಮೆಂಟ್ ಕಾರ್ಪೊರೇಶನ್‌ನಲ್ಲಿ ವಿಶೇಷವಾಗಿ ಹರಿಜನ ಮಹಿಳೆಯರಿಗೆ ಎರಡು ಎಕರೆ ಜಮಾನನ್ನು ಕೊಡತಕ್ಕ ಕಾರ್ಯಕ್ರಮವಿದೆ.ಈಗಾಗಲೇ 9 ಸಾವಿರ ಎಕರೆ ಜಮಾನನ್ನು 4815 ಮಹಿಳೆಯರಿಗೆ ಕೊಟ್ಟಿದ್ದೇವೆ, ಅದಕ್ಕಾಗಿ 7 ಕೋಟಿ 76 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. ಈ ಎಸ್. ಸಿ. ಎಸ್ . ಟಿ. ಡೆವಲೆಪ್ ಮೆಂಟ್ ಕಾರ್ಪೊರೇಷನ್‌ನಿಂದ ಹರಿಜನರಿಗೆ ಬಾವಿಯನ್ನು ತೋಡಲು ಸಾಲವನ್ನು ಕೊಡುವುದಕ್ಕೆ ಕಾರ್ಯಕ್ರಮವಿದೆ. we have take lot of precautions.

ಶ್ರೀ ಕೆ. ಸಿದ್ದಯ್ಯ : ನನ್ನ ಪ್ರಶ್ನೆ ಏನೆಂದರೆ, ಜಮಾನುಗಳನ್ನು ಕೊಡಲು ಮತ್ತು ಅದರ ಮೇಲೆ ಅವರನ್ನು ನೆಲೆಸುವಂತೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ? ಈಗ ಅಕ್ರಮವಾಗಿ ಜಮಾನು ಸಾಗುವಳಿಯನ್ನು ಮಾಡತಕ್ಕಂಥಾದ್ದರಲ್ಲಿ ಅನೇಕರು ಬಹುಭಾಗವನ್ನು ಅಕ್ರಮ ಮಾಡಿಕೊಂಡಿದ್ದಾರೆ. 12 ಲಕ್ಷ ಎಕರೆ ಅಕ್ರಮವಾಗಿದೆ ಎಂದು ಇದೆ. ಅದರಲ್ಲಿ ಒಂದು ಲಕ್ಷ ಎಕರೆ ಮಾತ್ರ ಎಸ್.ಸಿ.ಎಸ್.ಟಿ.ಯವರು ಅಕ್ರಮ ಮಾಡಿಕೊಂಡಿದ್ದಾರೆ. ನಿಯಮದ ಪ್ರಕಾರ 50 ಪರ್‌ಸೆಂಟ್ ಎಂದರೆ ಇವರಿಗೆ 6 ಲಕ್ಷ ಎಕರೆ ಬರಬೇಕು, ಅದರಲ್ಲಿ ಒಂದು ಲಕ್ಷ ಎಕರೆ ಮಾತ್ರ ಸಿಗುತ್ತದೆ. ಇದರಲ್ಲೂ ಎಷ್ಟು ಸಿಗುತ್ತದೆಯೋ ಅಥವಾ ಸಿಗುವುದಿಲ್ಲವೋ ಗೊತ್ತಿಲ್ಲ. ಅದೊಂದು ವಿಚಾರ , ಭೂಸುಧಾರಣೆಯ ಕಾನೂನಿನ ಪ್ರಕಾರ ಎಕ್ಸೆಸ್ ಲ್ಯಾಂಡ್ 12 ಲಕ್ಷ ಎಕರೆ ಇದೆ. ಅದರಲ್ಲಿ 6 ಲಕ್ಷ ಎಕರೆ ಇವರಿಗೆ ಬರಬೇಕಾಗುತ್ತದೆ. ಅಕ್ರಮ ಸಾಗುವಳಿಯಲ್ಲಿ ಬರಬೇಕಾದ 5 ಲಕ್ಷ ಎಕರೆ ಜಮಾನನ್ನು ಈ ಎಕ್ಸೆಸ್‌ಲ್ಯಾಂಡ್‌ನಲ್ಲಿ ಕೊಡುವುದಕ್ಕೆ ಆಗುವುದಿಲ್ಲವೆ ಎಂದು ಹಿಂದೆ ಕೇಳಿದ್ದೆ. ಆಗಿನ ಸರ್ಕಾರದವರು ಇದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದರು. ಆದ್ದರಿಂದ ತಾವಾದರೂ ಇದನ್ನು ಕೊಟ್ಟು ಅವರುಗಳು ನೆಲೆಸಲು ಅನುಕೂಲ ಮಾಡಿಕೊಡುವುದಕ್ಕಾಗುವುದಿಲ್ಲವೆ? ಇದು ಸರ್ಕಾರದ ವ್ಯಾಪ್ತಿಯಲ್ಲಿ, ಸರ್ಕಾರದ ಅಧಿಕಾರದಲ್ಲಿದೆ. ಇದನ್ನಾದರೂ ಮಾಡುವುದಕ್ಕೆ ಹೋಗುತ್ತೀರ?

ವಿಷಯ: ನಗರಾಭಿವೃದ್ಧಿ ಇಲಾಖೆಯಲ್ಲಿ 1990ರಿಂದ 1992ರ ವರೆಗೆ ವಿವಿಧ ಕೆಲಸಗಳಿಗೆ ಖರ್ಚುಮಾಡಿದ ಹಣದ ಮೊತ್ತ

Q:1411

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು) : ಮಾನ್ಯ ನಗರಾಭಿವೃದ್ಧಿ ಸಚಿವರಾದ ಶ್ರೀ ಚೌತರೆಡ್ಡಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1990-91 ಮತ್ತು 1991-92ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯದಲ್ಲಿ ವಿವಿಧ ಕೆಲಸಗಾಗಿ ಖರ್ಚು ಮಾಡಿರುವ ಹಣವೆಷ್ಟು?

ಆ) ಸದರಿಸಾಲಿನಲ್ಲಿ ಕುಡಿಯುವ ನೀರಿಗಾಗಿ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಚೌತರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಇಲಾಖೆಗಳ ಹೆಸರು	1990-1991		1991-1992	
	ಹಂಚಿಕೆಯಾದ ಹಣ	ವೆಚ್ಚ	ಹಂಚಿಕೆಯಾದ ಹಣ	ವೆಚ್ಚ
1) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ	329.21	326.71	592.00	603.00
2) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	890.00	890.00	1342.00	1642.00
3) ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿ	1717.00*	1640.14	2365.00	2868.73
4) ಪೌರಾಡಳಿತ ನಿರ್ದೇಶನಾಲಯ	60.00	60.00	386.25	261.20
5) ನೆಹರು ರೋಜಿಗಾರ್‌ಯೋಜನೆ	480.00	480.00	317.70	452.37
6) ನಗರ ಯೋಜನಾ ನಿರ್ದೇಕರು	27.50	25.50	47.00	47.00
7) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ	22.00	17.60	49.00	49.00
8) ಬೆಂಗಳೂರು ನಗರ ಕಲಾ ಆಯೋಗ	3.00	3.00	3.00	3.00

* ಬಿಡುಗಡೆಯಾದ ಹಣ ರೂ. 1952.75 ಲಕ್ಷಗಳು. (ಮೂಲ : ಮುಂಗಡ ದಸ್ತಾವೇಜು : ಎಂ .ಎಂ .ಆರ್.ಕಡತಗಳು ಮತ್ತು ವಾರ್ಷಿಕ ವರದಿಗಳು.)

ಅ)	1990-91	1991-92
1) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ರೂ. 890.00 ಲಕ್ಷಗಳು	ರೂ.1642.00 ಲಕ್ಷಗಳು
2) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ರೂ. 1640.14 ಲಕ್ಷಗಳು	ರೂ.2868.73 ಲಕ್ಷಗಳು

ಟಿಪ್ಪಣಿ :- ಈ ಅನುದಾನದ ಮತ್ತು ಖರ್ಚಿನ ಬಾಬ್ತು ಯೋಜನೆಗೆ ಮಾತ್ರ ಸಂಬಂದಿಸಿದುದಾಗಿರುತ್ತದೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಸಿದ್ದಯ್ಯನವರ ಕಳಕಳಿ ಏನೆಂದರೆ, ಹರಿಜನರು ಎಲ್ಲಿ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಆ ಲ್ಯಾಂಡ್ ರೆಗ್ಯುಲರೈಸೇಷನ್ ಆಗಬೇಕು, ಮತ್ತು ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಎಕ್ಸೆಸ್ ಲ್ಯಾಂಡ್ ಡಿಸ್ಟ್ರಿಬ್ಯೂಟ್ ಆಗಬೇಕು ಎಂದಿದ್ದಾರೆ. ಇದರ ಬಗ್ಗೆ ರೆವಿನ್ಯೂ ಖಾತೆಯಲ್ಲಿ ಸಮಾಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಮಹದೇವರವರ ಪ್ರಶ್ನೆಗೆ 15 ದಿನಗಳ ಕಾಲಾವಕಾಶ ಬೇಕೆಂದು ಮಂತ್ರಿಗಳು ಕೇಳಿದ್ದಾರೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಹರಿಜನಮಹಿಳೆಯ ಮೇಲೆ ನಡೆದಿರುವ ದೌರ್ಜನ್ಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಬೇರೆ ರೀತಿಯಲ್ಲಿ ಪ್ರಶ್ನೆಯನ್ನು ತೆಗೆದುಕೊಂಡು ಬನ್ನಿ. ಅವಕಾಶ ಕೊಡುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಮಾನ್ಯ ಅಧ್ಯಕ್ಷರೇ, ಅವರು ಎಸ್.ಸಿ. ಬಗ್ಗೆ ಪ್ರಶ್ನೆ ತಂದಾಗ ಸಪ್ಲಿಮೆಂಟರಿಗೆ ಅವಕಾಶ ಕೊಡಲಿಲ್ಲ. ಇವತ್ತೂ ಕೂಡ ಅವಕಾಶ ಕೊಡುತ್ತಾ ಇಲ್ಲ.

ಅಧ್ಯಕ್ಷರು : ಅವರಿಗೆ ಪ್ರಾಮುಖ್ಯತೆ ಇದೆ. ಅವರು ಕೇಳಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಅವರು ಉತ್ತರ ಕೊಟ್ಟಿರುವುದು ಪೂರ್ತಿ ಪುಸ್ತಕದ ಬದನೆಕಾಯಿ. ಕಮಿಟಿಯವರು ಎಷ್ಟು ವರದಿ ಕೊಟ್ಟಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದಾರೆ. ಸುಮ್ಮನೆ ಕಮಿಟಿ ಮಾಡಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳುತ್ತಾರೆ. ಒಂದು ಎಕರೆಯನ್ನು 22 ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಒಂದು ಎಕರೆ 22 ಸಾವಿರ ರೂಪಾಯಿಗಳಿಗೆ ಎಲ್ಲೂ ಸಿಗುವುದಿಲ್ಲ. ಇದು ಕಣ್ಣೀರು ಒರೆಸುವ ನೀತಿಯಾಗಿದೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, 1990-91 ಮತ್ತು 1991-92 ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯದಲ್ಲಿ ವಿವಿಧ ಕೆಲಸಗಳಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಬರೀ ಯೋಜನೆಗಳ ಬಾಬ್ತಿನಲ್ಲಿ ಖರ್ಚು ಮಾಡಿರತಕ್ಕಂಥ ವಿವರಗಳನ್ನು ಕೊಟ್ಟಿದ್ದಾರೆ. ಯೋಜನೇತರ ಬಾಬ್ತಿಗೆ ಖರ್ಚು ಮಾಡಿರುವುದನ್ನು ಏಕೆ ಕೊಟ್ಟಿಲ್ಲ? ನಾನು ಕೇಳಿರುವುದು 1990-91 ಮತ್ತು 1991-92 ನೇ ಸಾಲಿನ ಖರ್ಚನ್ನು ಕೇಳಿದ್ದೇನೆ. ಇವರು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಗ್ರಾಮ ರಾಜ್ಯದ ಕನಸು ಹೋಗಿ ರಾಮ ರಾಜ್ಯ ಮಾಡುವುದಕ್ಕೆ ಹೊರಟಿದ್ದಾರೆ ಎಂದು ನನಗೆ ಅನಿಸುತ್ತದೆ. ಏಕೆಂದರೆ ಪೌರಾಡಳಿತದ ನಿರ್ದೇಶನಾಲಯಕ್ಕೆ 2 ಕೋಟಿ 61 ಲಕ್ಷ

ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಎಷ್ಟು ಪುರಸಭೆಗಳು ಇವೆ, ಎಷ್ಟು ಜನಸಂಖ್ಯೆ ಇದೆ, ಅದಕ್ಕೆ ಎಷ್ಟು ಕಡಿಮೆ ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಬೇಕು. ಎರಡನೆಯದಾಗಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಕೇವಲ 6 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವವರು ಕಡುಬಡವರು, ಭಿಕ್ಷೆ ಬೇಡುವವರು. ಅವರ ಕ್ಷೇಮಾಭಿವೃದ್ಧಿ ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ.ಅದಕ್ಕೆ ಏಕೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸಬೇಕು.ಬೆಂಗಳೂರಿನಲ್ಲಿ ಜನಸಾಂದ್ರತೆಯನ್ನು ತಡೆಗಟ್ಟುವುದಕ್ಕೆ ಮತ್ತು ಅಹಿತಕರ ವಾತಾವರಣವನ್ನು ತಡೆಗಟ್ಟುವುದಕ್ಕೆ ಹಾಗೂ ಬೆಂಗಳೂರು ಬೆಳವಣಿಗೆಗೆ ಏನಾದರೂ ನಿಷೇಧ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆಯೇ ತಿಳಿಸಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : (ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ) ; ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಗರಾಭಿವೃದ್ಧಿಇಲಾಖೆಯಿಂದ ರಾಜ್ಯದಲ್ಲಿ ವಿವಿಧ ಕೆಲಸಗಳಿಗೆ ಬೇರೆ ಬೇರೆ ಕಾರ್ಪೋರೇಷನ್ ಬೋರ್ಡ್‌ನಿಂದ ಮಾಡಿದ ಖರ್ಚನ್ನು ಇಲ್ಲಿ ತೋರಿಸಿದ್ದೇವೆ.ಮುನ್ಸಿಪಾಲಿಟಿಯವರಿಗೆ, ಸಿಟಿ ಮುನ್ಸಿಪಾಲಿಟಿ ,ಕಾರ್ಪೋರೇಶನ್ ಇವರಿಗೆ ಕೊಟ್ಟ ಹಣವನ್ನು ಇಲ್ಲಿ ತೋರಿಸಿಲ್ಲ.ಏಕೆಂದರೆ ನೀವು ಡೆವಲೆಪ್‌ಮೆಂಟ್ ಲೋನ್ ಬಗ್ಗೆ ಕೇಳಿದ ಕಾರಣ ಅದು ಮಾತ್ರ ಇಲ್ಲಿ ಸರಿಯಾಗಿ ಕೊಟ್ಟಿದ್ದೇವೆ. 1990-91ರಲ್ಲಿ ನೋಡಿದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ನಾವು ಕೊಟ್ಟಿದ್ದು 329.21 ಲಕ್ಷ ರೂಪಾಯಿಗಳು. 1991-92 ರಲ್ಲಿ 592 ಲಕ್ಷ ಕೂಪಾಯಿಗಳು ಸ್ಯಾಂಕ್ಷನ್ ಮಾಡಿದ್ದು, ಆದರೆ ಖರ್ಚಾಗಿದ್ದು 603 ಲಕ್ಷ ರೂಪಾಯಿಗಳು. ಪ್ರತಿ ವರ್ಷ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಹೆಚ್ಚು ಹಣವನ್ನು ಒದಗಿಸುತ್ತಾ ಬಂದಿದ್ದೇವೆ. 2 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಇಲಾಖೆಗಳಿಂದ ಎಲ್ಲಾ ಕಾರ್ಪೋರೇಷನ್‌ನವರಿಗೆ, ಮುನ್ಸಿಪಾಲಿಟಿಗೆ, ಟೌನ್ ಮುನ್ಸಿಪಾಲಿಟಿಯವರಿಗೆ ಖರ್ಚು ಮಾಡಿದ್ದೇವೆ. ನಿಮ್ಮ ಪ್ರಶ್ನೆಯನ್ನು ಬೇರೆ ರೀತಿಯಲ್ಲಿ ಕೇಳಿದರೆ ಉತ್ತರ ಕೊಡುತ್ತೇವೆ. ಅವರಿಗೆ ಹಣವನ್ನು ಮುನ್ಸಿಪಾಲಿಟಿಯಿಂದಾಗಲಿ,ಕಾರ್ಪೊರೇಷನ್‌ನಿಂದಾಗಲಿ ಕೊಟ್ಟಿದ್ದೀರಾ ಎಂದು ಕೇಳಿದ್ದೀರಿ. ಅವರಿಗೆ ಗ್ರಾಂಟ್ಸ್ ಮಾತ್ರವಲ್ಲದೆ ಕಾರ್ಪೊರೇಷನ್‌ನಿಂದ ಆಕ್ಟ್ರಾಯ್ ಗ್ರಾಂಟ್ಸ್ ಸಹ ಕೊಟ್ಟಿದ್ದೇವೆ. ಹೋದ ವರ್ಷ ನಾವು 64 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಈ ವರ್ಷ 15 ಪರ್ಸೆಂಟ್ ಹೆಚ್ಚು ಮಾಡಿದ್ದೇವೆ ಎಂದು ಬಜೆಟ್‌ನಲ್ಲಿ ಕಾಣಿಸಿದ್ದೇವೆ. ಅದೇ ರೀತಿಯಲ್ಲಿ ಬೇರೆ ಬೇರೆ ಗ್ರಾಂಟ್ಸನ್ನು ನಾವು ಕಾರ್ಪೊರೇಷನ್ ಮತ್ತು ಮುನ್ಸಿಪಾಲಿಟಿಗೆ ಕೊಡುತ್ತಾ ಬಂದಿದ್ದೇವೆ.

ಶ್ರೀ ಎ. ಟಿ. ರಾಮಸ್ವಾಮಿ : 1990-91, 1991-92 ರಲ್ಲಿ ನಗರ ಅಭಿವೃದ್ಧಿ ಇಲಾಖೆಯಲ್ಲಿ ಒಟ್ಟು ಎಷ್ಟು ಖರ್ಚಾಗಿದೆ ಎಂದು ನಾನು ಕೇಳಿದ್ದು , ಆದರೆ ನೀವು ಬರೀ ಯೋಜನಾ ಬಾಬ್ತಿಗೆ ಖರ್ಚುಮಾಡಿದ್ದನ್ನು ಕೊಟ್ಟಿದ್ದೀರಿ. ಯೋಜನೇತರ ಬಾಬ್ತಿಗೆ ಖರ್ಚುಮಾಡಿರುವುದನ್ನು ಏಕೆ ಕೊಡಲಿಲ್ಲ? ಅದನ್ನು ತಾವು ಹೇಳಬೇಕು. ಮತ್ತು ಈ ಪುರಸಭೆಗಳಿಗೆ ಬಹಳ ಕಡಿಮೆ ಹಣವನ್ನು ನಿಗದಿ ಮಾಡಿದ್ದೀರಿ. ಮತ್ತು ನೀವು 2 ಕೋಟಿ 61 ಲಕ್ಷ ರೂಪಾಯಿ ಮಾತ್ರ ನಿಗದಿ ಮಾಡಿದ್ದೀರಿ. ಜನಸಂಖ್ಯೆಗೆ ಅನುಗುಣವಾಗಿ ಏಕೆ ನಿಗದಿ ಮಾಡಿಲ್ಲ . ಹಾಗೂ ನೀವು ಬರೀ ನಗರಗಳನ್ನು ಅಭಿವೃದ್ಧಿ ಮಾಡಿಕೊಂಡು ಹೋಗುತ್ತೀರಿ. ಬೆಂಗಳೂರಿನ ಬೆಳವಣಿಗೆ ಮೇಲೆ ಏನಾದರೂ ನಿಷೇಧ ಹಾಕುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆಯೇ ಎನ್ನುವ ವಿಚಾರವನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಅವರು 1990-91, 1991-92ನೇ ಸಾಲಿನಲ್ಲಿ

ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯದಲ್ಲಿ ವಿವಿಧ ಕೆಲಸಗಳಿಗಾಗಿ ಖರ್ಚುಮಾಡಿರುವ ಹಣ ಎಷ್ಟು ಎನ್ನುವ ಪ್ರಶ್ನೆ ಕೇಳಿದ್ದಾರೆ. ನಾವು ಹಣ ಕೊಟ್ಟಿರುವ ವಿಷಯ ನೀವು ಕೇಳಲಿಲ್ಲ. ನಾವು ಬೇರೆ ಬೇರೆ ಇಲಾಖೆಗಳಿಂದ ಖರ್ಚುಮಾಡಿದ ಹಣ ನೀವು ಕೇಳಿದ್ದೀರಿ, ಅದನ್ನು ಸರಿಯಾಗಿ ಕೊಟ್ಟಿದ್ದೇವೆ. ಅದಕ್ಕೆ ನೀವು ಬೇರೆ ಪ್ರಶ್ನೆ ಹಾಕಿದರೆ ಅದರ ಮಾಹಿತಿ ಕೊಡುತ್ತೇವೆ. ಮತ್ತೆ ನೀವು ನಮ್ಮ ಬೆಂಗಳೂರಿನ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಅದನ್ನು ತಡೆಯುವುದಕ್ಕೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಿರಿ. ಅದು ಪಾಲಿಸಿ ಮ್ಯಾಟರ್ ಆಗುತ್ತದೆ. ನಾವು ಬರೀ ಅಭಿವೃದ್ಧಿ ಇಲಾಖೆಯಿಂದ ಹೇಳುವುದಕ್ಕೆ ಆಗುವುದಿಲ್ಲ. ಇಡೀ ಕ್ಯಾಬಿನೇಟ್‌ನವರು ಅದನ್ನು ಪರಿಶೀಲನೆ ಮಾಡಿ ಇತ್ಯರ್ಥ ಮಾಡಬೇಕಾಗುತ್ತದೆ.

ವಿಷಯ :- ನೇಕಾರರಿಗೆ ಕಚ್ಚಾ ಸಾಮಗ್ರಿಗಳ ಕೊರತೆ

Q:1251

ಶ್ರೀ ಹೆಚ್. ವೈ. ಮೇಟಿ (ಗುಳೇದಗುಡ್ಡ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನೇಕಾರರ ಸಮಸ್ಯೆಗಳನ್ನು ಎದುರಿಸಲು ಸರ್ಕಾರಕ್ಕೆ ಮನವಿಗಳು ಏನಾದರೂ ಬಂದಿದೆಯೇ, ಹಾಗಿದ್ದಲ್ಲಿ ಆ ಸಮಸ್ಯೆಗಳು ಯಾವುವು?

ಆ) ಬಾದಾಮಿ ತಾಲ್ಲೂಕಿನ ಗುಳೇದಗುಡ್ಡ ಹಾಗೂ ಕಮತಗಿಯಲ್ಲಿ ನೇಕಾರರಿಗೆ ಕಚ್ಚಾಮಾಲು ಸಿಗದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಚ್ಚಾಮಾಲು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಈ ಹಿಂದೆ ಇದ್ದ ಕಚ್ಚಾಮಾಲಿನ ಬೆಲೆಯನ್ನು ಈಗ ಶೇಕಡ 50ರಷ್ಟು ಹೆಚ್ಚಿಸಿರುವುದು ನಿಜವಲ್ಲವೇ?

ಉ) ಸದರಿ ನೇಕಾರರು ತಯಾರಿಸಿದ ಮಾಲಿಗೆ ಬೆಲೆಯನ್ನು ಕಡಿಮೆ ಮಾಡಿರುವುದು ಸಹ ನಿಜವಲ್ಲವೇ?

ಊ) ಈ ರೀತಿ ಕಚ್ಚಾಮಾಲಿನ ಬೆಲೆ ಹೆಚ್ಚಿಸಿ ತಯಾರಿಸಿದ ಮಾಲಿನ ಬೆಲೆ ಇಳಿಸುತ್ತಿರುವುದರಿಂದ ನೇಕಾರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ಹೌದು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಸಹಕಾರ ಸಂಘಗಳ ನೇಕಾರರ ಪ್ರತಿನಿಧಿಗಳಿಂದ ಬೇಡಿಕೆಗಳ ಮನವಿಗಳು ಬಂದಿರುತ್ತವೆ. ಅವುಗಳಲ್ಲಿ ಪ್ರಮುಖವಾದವು ಕೆಳಕಂಡಂತೆ ಇರುತ್ತವೆ.

1) ನಿರಂತರ ಕಚ್ಚಾಮಾಲು ಸರಬರಾಜು ಮಾಡುವ ಬಗ್ಗೆ.
2) ನಿರಂತರ ಮಜೂರಿ ಪಾವತಿ ಮಾಡುವ ಬಗ್ಗೆ.
3) ಉತ್ತಮ ಗುಣಮಟ್ಟದ ನೂಲು ಸರಬರಾಜು ಮಾಡುವ ಬಗ್ಗೆ.